


**◆ ಗೂಗಿಯವರ ಸಂಪರ್ಕ ನಿಮಗೆ ಹೇಗೆ ಲಭಿಸಿತು?**

ನಾನು ಪ್ರಿನ್ಸ್ ಆಘಾಖಾನ್ ಅವರ 'ದಿ ಡೈಲಿ ನೇಷನ್' ಪತ್ರಿಕೆಯಲ್ಲಿ ಫೋಟೊ ಜರ್ನಲಿಸ್ಟಾಗಿ ಕೆಲಸ ಮಾಡುತ್ತಿದ್ದೆ. ನೈರೋಬಿ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದ ಗೂಗಿ, ನಮ್ಮ ಪತ್ರಿಕೆಗೆ ಬರೆಯುತ್ತಿದ್ದರು. ಅವರು ಬಿಳಿಯರಲ್ಲಿ ಬಹಳ ಗೌರವ ಪಡೆದವರು. ಅವರು ಇಂಗ್ಲೆಂಡಿನ ಲೀಡ್ಸ್ ವಿಶ್ವವಿದ್ಯಾಲಯಕ್ಕೆ ಹೋದಾಗ 'ಈ ಕರಿಯನಿಗೆ ನಮ್ಮ ಕಾಲೇಜಿನಲ್ಲಿ ಪ್ರವೇಶ ಹೇಗೆ ಸಿಕ್ಕಿತಪ್ಪಾ?' ಎಂದು ಬಿಳಿಯರು ಗೊಂದಲಗೊಂಡಿದ್ದರು. ಅವರ ವಿದ್ವತ್ತಿಗೆ, ಪ್ರತಿಭೆಗೆ ಬೆರಗಾಗಿದ್ದರು. ಗೂಗಿಯವರಲ್ಲಿ ಕೀಳರಿಮೆಯಿರಲಿಲ್ಲ. ಧೈರ್ಯದಿಂದ ಮುಕ್ತವಾಗಿ ತಮ್ಮ ಅಭಿಪ್ರಾಯ ವ್ಯಕ್ತ ಮಾಡುತ್ತಿದ್ದರು. ಬ್ರಿಟಿಷರ ಇತಿಹಾಸವನ್ನು ಅವರಿಗಿಂತ ಮಿಗಿಲಾಗಿ ತಿಳಿದಿದ್ದರು. ಅವರಿಗೆ ಕ್ರಾಂತಿಕಾರಿ ಚಟುವಟಿಕೆಯಲ್ಲಿ ಭಾಗವಹಿಸಿದ್ದಕ್ಕಾಗಿ ಕೀನ್ಯನ್ ಸರ್ಕಾರ ಬಂಧಿಸಿತು.